# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಸಿ.ಸಿ. 1588/2021

ಸಾಕ್ಷಿದಾರರ ಹೇಳಿಕೆಃ

| | | | |
|---|---|---|---|
| **ಹೆಸರು** | : ಪರಮೇಶ್ವರಪ್ಪ | ಚಾಸಾಃ **1** | ಪ್ರಾಸಾಃ **1** |
| **ತಂದೆಯ ಹೆಸರು** | : ನರಸಪ್ಪ | | |
| **ವಯಸ್ಸು** | : **49** ವರ್ಷ | | |
| **ವೃತ್ತಿ** | : ವಕೀಲರು | | |
| **ವಾಸಸ್ಥಳ** | : ಭದ್ರಾವತಿ | | |

ದಿನಾಂಕಃ **13-12-2024** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:-

ಆರೋಪಿತರು ಗೊತ್ತು. ಚಾಸಾ-5 ಮತ್ತು 8 ನನ್ನ ಅಣ್ಣಂದಿರು. ಚಾಸಾ-2 ರಿಂದ 4, 6 ಮತ್ತು 7 ಗೊತ್ತು. ದಿಃ 05-02-2021 ರಂದು ಸಂಜೆ 05-00 ಗಂಟೆ ಸಮಯದಲ್ಲಿ ಆರೋಪಿತರು ನಮ್ಮ ಜಮೀನಿನ ಸರ್ವೇ ನಂ.25/4 ರಲ್ಲಿ ಕಲ್ಲನ್ನು ಹಾಕಿದ್ದರು. ಆರೋಪಿತರ ಜಮೀನು ನಮ್ಮ ಜಮೀನಿನ ಮೇಲ್ಭಾಗದಲ್ಲಿದ್ದು ಆರೋಪಿತರು ತಮ್ಮ ಜಮೀನಿನಿಂದ ನಮ್ಮ ಜಮೀನಿಗೆ ಪದೇ ಪದೇ ನೀರು ಬಿಡುವುದು ಮತ್ತು ಕಲ್ಲು ಹಾಕುವುದು ಮಾಡುತ್ತಿದ್ದರು. ಮತ್ತು ನಮ್ಮ ಜಮೀನಿನಲ್ಲಿ ಹಾಕಿದ್ದ ಗಿಡಗಳನ್ನು ಕಿತ್ತುಹಾಕಿದ್ದರು. ಆ ಸಮಯದಲ್ಲಿ ನಾನು ನಮ್ಮ ಜಮೀನಿನಲ್ಲಿ ಹಾಕಿದ್ದ ಕಲ್ಲನ್ನು ಆರೋಪಿತರಿಗೆ ತೆಗೆದುಕೊಳ್ಳಿ ಎಂದು ಹೇಳಿದಾಗ 2 ನೇ ಆರೋಪಿ ಕುಡಗೋಲಿನಿಂದ ನನ್ನ ತಲೆಯ ಎಡಭಾಗಕ್ಕೆ ಹೊಡೆದು ಹಲ್ಲೆ ಮಾಡಿದರು. ಆಗ 1 ನೇ ಆರೋಪಿಯು ಚಾಸಾ-5 ಮತ್ತು 8 ರವರಿಗೆ ಕಾಡು ಕೋಲಿನಿಂದ ಮೈಕೈಗೆ ಹೊಡೆದು ಮತ್ತು ಕೈಯಿಂದ ಎದೆಗೆ ಮತ್ತು ಬೆನ್ನಿಗೆ ಗುದ್ದಿ ನೋವುಂಟು ಮಾಡಿರುತ್ತಾರೆ. ಮತ್ತು ಆರೋಪಿತರು ನನಗೆ, ಚಾಸಾ-5 ಮತ್ತು 8 ರವರಿಗೆ ಕೊಲೆ ಮಾಡುತ್ತೇವೆ ಎಂದು ಕೊಲೆ ಬೆದರಿಕೆಯನ್ನು ಹಾಕಿರುತ್ತಾರೆ. ಆ ಸಮಯದಲ್ಲಿ ಚಾಸಾ-4, 6 ಮತ್ತು 7 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ. ನಂತರ ನಾನು ಮತ್ತು ಚಾಸಾ-5 ರವರು ಹೊನ್ನಾಳಿ ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿರುತ್ತೇವೆ. ದಿಃ 06-02-2021 ರಂದು ಪೊಲೀಸ್ ಠಾಣೆಗೆ ಹೋಗಿ ದುರನ್ನು ಕೊಟ್ಟಿರುತ್ತೇನೆ.

ದಿಃ 07-02-2021 ರಂದು ಸಂಜೆ 05-00 ರಿಂದ 06-00 ಗಂಟೆ ಸಮಯದಲ್ಲಿ ನಾನು ಸ್ಥಳ ತೋರಿಸಿದ ಮೇರೆಗೆ ನನ್ನ ಮತ್ತು ಚಾಸಾ-2 ಮತ್ತು 3 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ , ಕಚ್ಚ ನಕಾಶೆಯನ್ನು ತಯಾರಿಸಿ, ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ. ನಾನು ಹಾಜರುಪಡಿಸಿದ ಕಟ್ಟಿಗೆ ಮತ್ತು ಕುಡುಗೋಲನ್ನು ವಶಪಡಿಸಿಕೊಂಡಿರುತ್ತಾರೆ.

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶಕೋರಿದ್ದು ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.